ಊ) ಹಾಲು ಪ್ರೋತ್ಸಾಹ ಧನವನ್ನು ಸರ್ಕಾರದ ಆಯವ್ಯಯದಿಂದ ನೀಡಲಾಗುತ್ತದೆ. ಇದನ್ನು ಹಾಲಿನ ಮಾರಾಟ ದರದ ಆಧಾರದ ಮೇಲೆ ನೀಡಲಾಗುತ್ತಿಲ್ಲ.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಲ್ಲಿನ ಅವ್ಯವಹಾರಗಳು

796 (789) ರಾಮಲಿಂಗಾರೆಡ್ಡಿ (ಬಿ.ಟಿ.ಎಂ. ಲೇಔಟ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೇಂದ್ರದ ನೆರವಿನ ಮಹಾತ್ಮಾಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಜನರಿಗೆ ಈ ಯೋಜನೆಯಡಿಯಲ್ಲಿ ಉದ್ಯೋಗ ನೀಡಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು);

ಇ) ಇದಕ್ಕಾಗಿ ಖರ್ಚಾದ ಹಣವೆಷ್ಟು;

ಈ) ಈ ಯೋಜನೆಯ ಅನುಷ್ಠಾನದಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಕೇಂದ್ರದ ನೆರವಿನ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಮತ್ತು ಇ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಈ) ಸರ್ಕಾರದ ಗಮನಕ್ಕೆ ಬಂದಿದೆ.

ಊ) ಕಂಡು ಬಂದಿರುವ ಪ್ರಕರಣಗಳಲ್ಲಿ ಸರ್ಕಾರವು ನಿಯಮಾನುಸಾರ ತಪ್ಪಿತಸ್ಥರ ವಿರುದ್ಧ ಶಿಸ್ತಿನ ಕ್ರಮವನ್ನು ಜರುಗಿಸಲಾಗುತ್ತಿದೆ.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 789
ಅನುಬಂಧ

Sl. No.	District	Epmlyment Provided	Employment provided to individuals	Ependiture (in lakhs)
Phase-I				
1	BIDAR	95706	178436	5791.96
2	CHITRA DURGA	108521	234784	8353.39
3	DAVANA GERE	151792	365224	11943.73
4	GULBARGA	286178	615911	23715.51
5	RAICHUR	149024	575513	11435.92
Phase-II				
6	BELGAUM	292533	737065	21196.85
7	BELLARY	82150	299763	8025.79
8	CHIKMA GALUR	37932	113337	2690.27
9	HASSAN	61536	163889	3836.31
10	KODAGU	14073	34847	1014.71
11	SHIMOGA	122355	271082	6137.49
Phase III				
12	BAGALKOTE	149257	364181	10166.14
13	BANGALORE	36545	121623	3116.06
14	BANGALORE RURAL	41786	125546	4089.07
15	BIJAPUR	128119	375828	9680.60
16	CHAMARAJA NAGARA	54315	125889	2466.05
17	CHIKKABAK KAPURA	127798	346935	8006.05
18	DAKSHINA KANNADA	26250	56901	1408.68
19	DHARWAR	50051	129539	4139.93
20	GADAG	63544	149876	3690.49
21	HAVERI	97939	224731	8510.07

22	KOLAR	194017	553971	13671.57
23	KOPPAL	130186	387927	7895.72
21	MANDYA	49723	114559	2814.21
25	MYSORE	110898	305496	6419.71
26	RAMANA GARA	44144	122152	3482.94
27	TUMKUR	220059	751017	15674.54
28	UDUPI	16787	30715	614.47
29	UTTARA KANNADA	57182	113584	2930.65
	Total	**3000400**	**7990321**	**212918.88**

ಶಾಲಾ ಮಕ್ಕಳಿಗೆ ಬೈಸಿಕಲ್ ವಿತರಣೆ

797 (790) ಶ್ರೀ ರಾಮಲಿಂಗರೆಡ್ಡಿ (ಬಿ.ಟಿ.ಎಂ.ಲೇಔಟ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ರಲ್ಲಿ ಇಲ್ಲಿಯವರೆಗೆ ರಾಜ್ಯದಲ್ಲಿ ಎಷ್ಟು ಶಾಲಾ ಮಕ್ಕಳಿಗೆ ಬೈಸಿಕಲ್ ವಿತರಿಸಲಾಗಿದೆ;

ಆ) ಬೈಸಿಕಲ್‌ಗಳನ್ನು ಯಾರಿಂದ ಖರೀದಿಸಲಾಗಿದೆ;

ಇ) ಒಂದು ಸೈಕಲ್‌ಗೆ ತಗಲುವ ವೆಚ್ಚವೆಷ್ಟು;

ಈ) ಈ ಸೈಕಲ್ ಖರೀದಿಗಾಗಿ ಸರ್ಕಾರ ನೀಡಿದ ಹಣವೆಷ್ಟು;

ಉ) ಈ ಸೈಕಲ್‌ಗಳು ಕಳಪೆ ದರ್ಜೆಯಿಂದ ಕೂಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಈ ಸೈಕಲ್‌ಗಳ ನಿರ್ವಹಣೆಗೆ ಪ್ರತಿ ತಿಂಗಳು ವಿದ್ಯಾರ್ಥಿಗಳಿಗೆ ಸರ್ಕಾರ ನೀಡುವ ಹಣವೆಷ್ಟು;

ಋ) ನೀಡದಿದ್ದಲ್ಲಿ ಈ ಸೈಕಲ್‌ಗಳ ನಿರ್ವಹಣೆ, ರಿಪೇರಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 2009–10ನೇ ಸಾಲಿನಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 8ನೇ ತರಗತಿಯ 5,06,223 ಮಕ್ಕಳಿಗೆ ಬೈಸಿಕಲ್ ವಿತರಣೆ ಮಾಡಲಾಗಿದೆ.